# ಭಟ್ಟರ ಗರಡಿ ಹುಡುಗನ ಮೊದಲ ಕನಸು



'ನ್ಯೂಯಾರ್ಕ್ ಫಿಲ್ಮ್ ಅಕಾಡೆಮಿ'ಯಲ್ಲಿ ಸಿನಿಮಾ ನಿರ್ದೇಶನದ ವ್ಯಾಕರಣ ಕಲಿತ ಹರಿಪ್ರಸಾದ್ ಜಯಣ್ಣ ಅವರ ಚೊಚ್ಚಿಲ ಸಿನಿಮಾ 'ಪದವಿ ಪೂರ್ವ' ಡಿ. 30ರಂದು ತೆರೆಕಾಣುತ್ತಿದೆ. ಜಯಣ್ಣ ಅವರ ಎದೆಯಲ್ಲೀಗ ಕಾಲೇಜ್ ಕ್ಯಾಂಪಸ್‌ನ ತಳಮಳ–ರಂಗುಗಳು!

■ ವಿಶಾಖ ಎನ್.

ಸಿನಿಮಾ ವಿದ್ಯಾರ್ಥಿಗಳಿಗೆ 'ಮೊದಲ ಮುಚ್ಚಟೆ' ಎನ್ನುವುದೊಂದು ಇರುತ್ತದೆ. ಗಿರೀಶ ಕಾಸರವಳ್ಳಿ 'ಎಫ್‌ಟಿಐಐ'ನಲ್ಲಿ ಕಲಿಯುವಾಗ ಪ್ರಾಜೆಕ್ಟ್‌ಗೆಂದು ಸಿದ್ಧಪಡಿಸಿದ್ದ 'ಘಟಶ್ರಾದ್ಧ' ಚಿತ್ರಕಥೆಯು ಆಮೇಲೆ ಸಿನಿಮಾ ಆಗಿ ಮೂಡಿಬಂದು ಸದ್ದು ಮಾಡಿದ ಉದಾಹರಣೆ ಕಣ್ಣೆದುರಲ್ಲಿ ಇದೆ. ಹರಿಪ್ರಸಾದ್ ಜಯಣ್ಣ ಕೂಡ ಅದೇ ಜಾಯಮಾನದವರು. ಅವರು 'ಎಫ್‌ಟಿಐಐ'ನಲ್ಲಿ ಕಲಿಯಲಿಲ್ಲವಾದರೂ, 'ನ್ಯೂಯಾರ್ಕ್ ಫಿಲ್ಮ್ ಅಕಾಡೆಮಿ'ಯಲ್ಲಿ ಚಲನಚಿತ್ರ ವ್ಯಾಕರಣದ ಪಾಠ ಕೇಳಿಕೊಂಡು ಬಂದವರು. ಕಲಿಕೆಯ ಸಮಯದಲ್ಲಿ ಮೊಳೆತಿದ್ದ ಕಥಾವಸ್ತುವನ್ನೇ 'ಪದವಿ ಪೂರ್ವ' ಎಂಬ ಅಚ್ಚಕನ್ನಡದ ಚಿತ್ರವನ್ನಾಗಿ ರೂಪಿಸಿ, ಚಿತ್ರವನ್ನು ಚಿತ್ರಮಂದಿರಗಳ ಹೊಸ್ತಿಲಿಗೆ ತಂದಿದ್ದಾರೆ.

ಹರಿಪ್ರಸಾದ್ ಒಂದು ದಶಕಕ್ಕೂ ಹೆಚ್ಚು ಅವಧಿ ಚಿತ್ರರಂಗದಲ್ಲಿ ಸೈಕಲ್ ಹೊಡೆದಿದ್ದಾರೆ. ತುಮಕೂರು ಅವರ ತವರು. ಎಂಜಿನಿಯರಿಂಗ್ ಪದವೀಧರರಾಗಿ ಕಲಿತ ಮೇಲೆ ಅವರು ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಕೆಲಸ ಹಿಡಿದು ಅಮೆರಿಕಕ್ಕೆ ಹಾರಿದ್ದರು. ಚಿಕ್ಕಂದಿನಿಂದಲೂ ತಲೆಯೊಳಗೆ ಇದ್ದ ಸಿನಿಮಾ ಗುಂಗಿಹುಳ ಹೆಚ್ಚು ಕೊರೆಯತೊಡಗಿದ್ದೇ, ಕೆಲಸ ಬಿಟ್ಟು ನ್ಯೂಯಾರ್ಕ್ ಫಿಲ್ಮ್ ಅಕಾಡೆಮಿಗೆ ಸೇರಿದರು. 'ತಿಥಿ' ಸಿನಿಮಾ ನಿರ್ದೇಶಕ ರಾಮ್‌ರೆಡ್ಡಿ ಅವರೂ ಹೀಗೆ ವಿದೇಶದಲ್ಲಿ ಸಿನಿಮಾ ವಿದ್ಯಾರ್ಥಿಯಾಗಿದ್ದವರೇ.

ಹರಿಪ್ರಸಾದ್ ತಾವು ಕಲಿತ ಸಿನಿಮಾ ಪಾಠಗಳನ್ನು ಚಲನಚಿತ್ರವಾಗಿ ಪರಿವರ್ತಿಸಲೆಂದೇ ಭಾರತಕ್ಕೆ ಮರಳಿದರು. ನಾಗತಿಹಳ್ಳಿ ಚಂದ್ರಶೇಖರ್ ಜೊತೆಯಲ್ಲಿ 'ಬ್ರೇಕಿಂಗ್ ನ್ಯೂಸ್' ಚಲನಚಿತ್ರದ ನಿರ್ದೇಶಕರ ವಿಭಾಗದಲ್ಲಿ ತೊಡಗಿಕೊಂಡರು. 2010ರಿಂದ ಹೀಗೆ ಶುರುವಾದ ಕನ್ನಡ ಸಿನಿಮಾ ಕೈಂಕರ್ಯ, ಆಮೇಲೆ ಯೋಗರಾಜ ಭಟ್ ಗರಡಿಗೆ ತಂದು ನಿಲ್ಲಿಸಿತು. 'ವಾಸ್ತು ಪ್ರಕಾರ', 'ದನ ಕಾಯೋನು' ಚಲನಚಿತ್ರಗಳಲ್ಲಿ ಅವರೊಟ್ಟಿಗೆ ನಿರ್ದೇಶನದ ಹಲವು ಪಟ್ಟುಗಳನ್ನು ಕಲಿತರು. 'ಮುಗುಳುನಗೆ' ಸಿನಿಮಾದ ಚಿತ್ರಕಥಾ ಹೆಣಿಗೆಯ ತಂಡದ ಸದಸ್ಯರಲ್ಲೂ ಒಬ್ಬರಾದರು. ಅಷ್ಟೇ ಅಲ್ಲ, 'ಪಂಚತಂತ್ರ' ಚಲನಚಿತ್ರದ ನಿರ್ಮಾಪಕರಲ್ಲಿ ಅವರೂ ಒಬ್ಬರಾದದ್ದು ಜಗಿತ.



'ಪದವಿ ಪೂರ್ವ' ಸುದ್ದಿಗೋಷ್ಠಿಯಲ್ಲಿ ನಟಿ ಸೋನಲ್ ಹಾಗೂ ಯೋಗರಾಜ ಭಟ್ ಅವರೊಂದಿಗೆ ನಿರ್ದೇಶಕ ಹರಿಪ್ರಸಾದ್ ಜಯಣ್ಣ